ಒ.ಎಸ್. ನಂ.35/2024
ಪಿಡಬ್ಲು-1

ದಿನಾಂಕ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನ್ನ ತಂದೆಗೆ ನಾನು, ಮರೆಪ್ಪ, ಸಿದ್ದಪ್ಪ, ಭೀಮರಾಯರವರು ಮಕ್ಕಳು ಎಂದರೆ ಸರಿ. ನಮ್ಮ ಕುಟುಂಬಕ್ಕೆ ಎಷ್ಟು ಜಮೀನುಗಳಿವೆ ಎಂದರೆ ಜಮೀನುಗಳಿರುತ್ತವೆ ಎಂದು ಹೇಳುತ್ತಾರೆ. ನಾನು ಈ ದಾವೆಯನ್ನು 08-ಎಕರೆ 16-ಗುಂಟೆ ನನ್ನ ಹೆಸರಿಗೆ ಇರಬೇಕೆಂದು ಮಾಡಿರುತ್ತೇನೆ. ದಾವಾ ಹಾಕುವ ಸಮಯದಲ್ಲಿ ದಾವಾಸ್ತಿಗಳ ಪಹಣಿಗಳಲ್ಲಿ ಯಾರ ಹೆಸರಿನಲ್ಲಿರುತ್ತವೆ ಎಂದರೆ ಸಾಕ್ಷಿ ಪ್ರಸ್ತುತವಾಗಿ ಸಿದ್ದಮ್ಮಳ ಹೆಸರಿನಲ್ಲಿ 04-ಎಕರೆ 17-ಗುಂಟೆ ಇರುತ್ತದೆ ಎಂದು ಹೇಳುತ್ತಾರೆ. ಉಳಿದ ಜಮೀನು ನನ್ನ ಹೆಸರಿಗೆ ಇರುತ್ತದೆ. ಸಿದ್ದಮ್ಮಳ ಹೆಸರಿಗೆ 04-ಎಕರೆ 17-ಗುಂಟೆ ಆಗುವ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಆಕೆಯ ಗಂಡ ಮರಲಿಂಗಪ್ಪನ ಹೆಸರಿನಲ್ಲಿರುತ್ತದೆ ಎಂದು ಹೇಳುತ್ತಾರೆ. 2017 ರಲ್ಲಿ ಮರಲಿಂಗಪ್ಪ ಮೃತಪಟ್ಟ ನಂತರ ಸಿದ್ದಮ್ಮಳ ಹೆಸರಿಗೆ ದಾವಾಸ್ತಿ ಆಗಿರುತ್ತದೆ ಎಂದರೆ ಸರಿ. 1992 ರಿಂದ ದಾವಾಸ್ತಿಯ ಪಹಣಿ ಮತ್ತು ಮುಟೇಷನ ನಂ.25 ದಿನಾಂಕ 27.11.1992 ಮರಲಿಂಗಪ್ಪನ ಹೆಸರಿಗೆ ದಕ್ಷಿಣ ಭಾಗದಲ್ಲಿರುವ 04-ಎಕರೆ 17-ಗುಂಟೆ ಜಮೀನು ಆಗಿರುತ್ತದೆ ಎಂದರೆ ಸರಿ. 1992 ರಿಂದ 2017 ರವರೆಗೆ ಮಲಿಂಗಪ್ಪನ ಹೆಸರು ಪಹಣಿಯಲ್ಲಿ ಬಂದಿರುತ್ತದೆ ಎಂದರೆ ಸರಿ. ಸಿದ್ದಮ್ಮಳು 2017 ರಲ್ಲಿ ಬ್ಯಾಂಕನಿದ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ.

ಸರ್ವೆ ನಂ.140 ರಲ್ಲಿ ಉತ್ತರ ದಿಕ್ಕಿನಲ್ಲಿರುವ 04-ಎಕರೆ 19-ಗುಂಟೆ ಜಮೀನನ್ನು ಭೀಮರಾಯನು ಸಾಗುವಳಿ ಮಾಡುತ್ತಾನೆ ಎಂದರೆ ಸಾಕ್ಷಿ ಪಾಳು ಬಿದ್ದಿರುತ್ತದೆ ಎಂದು ಹೇಳುತ್ತಾರೆ. ಪಾಲು ಪತ್ರದ ಪ್ರಕಾರ ಭೀಮರಾಯನ ಹೆಸರಿಗೆ 04-ಎಕರೆ 19-ಗುಂಟೆ ಜಮೀನು ಮತ್ತು 04-ಎಕರೆ 17-ಗುಂಟೆ ಮರಲಿಂಗಪ್ಪನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮರಲಿಂಗಪ್ಪನ ಹೆಸರಿಗೆ ಮುಟೇಷನ ಆದ ನಂತರ ಪಹಣಿಗಳು ಮತ್ತು ಮುಟೇಷನ ತಪ್ಪಾಗಿವೆ ಎಂದು ನಾನು ಯಾವುದೆ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಮರಲಿಂಗಪ್ಪ ಮತ್ತು ಸಿದ್ದಮ್ಮಳ ಹೆಸರು ಪಹಣಿಯಲ್ಲಿ ಮಾಲಿಕ ಎಂದು ಬಂದ ನಂತರ ನಾನು ನನ್ನ ಮಾಲಿಕತ್ವ ಮತ್ತು ಕಬ್ಜೆ ಕೋರಿ ನಾನು ಯಾವುದೆ ದಾವೆ ಹೂಡಿಲ್ಲ ಎಂದರೆ ಸರಿ. 1992 ರಿಂದ ಪ್ರಸ್ತುತವಾಗಿ ದಾವಾಸ್ತಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ದಾವಾಸ್ತಿಯ ಕರ ತುಂಬಿಲ್ಲ ಎಂದರೆ ಸರಿ. 1992 ರಿಂದ

ಪ್ರಸ್ತುತವಾಗಿ ಸರ್ವೆ ನಂ.140 ರಲ್ಲಿ 04-ಎಕರೆ 17-ಗುಂಟೆ ಜಮೀನನ್ನು ಪ್ರತಿವಾದಿಯರೆ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಸರ್ವೆ ನಂ.140 ನಾನು ನನ್ನ ಉಳಿದ ಸಹೋದರರು ಕೂಡಿ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1992 ರಿಂದ ಪ್ರಸ್ತುತವಾಗಿ ಸರ್ವೆ ನಂ.140 ರಲ್ಲಿ 04-ಎಕರೆ 17-ಗುಂಟೆ ಜಮೀನಿಗೆ ಪ್ರತಿವಾದಿಯರೆ ಮಾಲಿಕರು ಮತ್ತು ಕಬ್ಜೆದಾರರು ಇರುವುದರಿಂದ ಕೇವಲ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುವುದರಿಂದ ಈ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಉಳಿದ ಸಹೋದರರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ಈ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ಕಬ್ಜೆ ಹೊಂದಿದ ಬಗ್ಗೆ ಯಾವುದೆ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಆಸ್ತಿಗಳಿವೆ ಎಂದು ತೋರಿಸದ ಕಾರಣ ಈ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ